ಕ್ರಮಕ್ಕೆಗೊಂಡಿರುವುದು ಮೊದಲನೆಯ ಬಾರಿಗೆ ಮಾನ್ಯ ಈಗಿನ ಸಚಿವರು ಹೇಳಿದ ಪ್ರಕಾರ ಸುಮಾರು 700 ಹೊಸ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಹುಡ್ಕೋ ನೆರವನ್ನು ಪಡೆಯುವುದಕ್ಕಾಗಿ ಪ್ರಯತ್ನ ನಡೆದಿದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಈ ವರ್ಷ ಅದು ಆಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ : ಆಗುತ್ತದೆ.

ಉತ್ತರಹಳ್ಳಿ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿವಿಧ ಯೋಜನೆ

622 (5377) : ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ 2000 ದಿಂದ ಈವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಯಾವ ಯಾವ ಸಾಲ ಯೋಜನೆಗಳನ್ನು ಎಷ್ಟು ಜನರಿಗೆ ನೀಡಲಾಗಿದೆ.

ಆ) ನೇರ ಸಾಲ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು;

ಇ) ಇನ್ನೂ ಮಂಜೂರಾತಿ ಆಗಬೇಕಾದವರ ಸಂಖ್ಯೆ ಎಷ್ಟು; ಯಾವಾಗ ಉಳಿದ ಫಲಾನುಭವಿಗಳಿಗೆ ಮಂಜೂರು ಮಾಡಲಾಗುತ್ತದೆ;

ಈ) ನೇರ ಸಾಲಕ್ಕೆ ಮತ್ತೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಸ್ತಾಪ ಸರ್ಕಾರದಲ್ಲಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ 343 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ.	ಯೋಜನೆಯ	2000–01	2001–02	2002–03
1.	ಸ್ವಯಂ ಉದ್ಯೋಗ	25	14	18
2.	ಐ.ಎಸ್.ಬಿ	08	09	18
3.	ಮೈಕ್ರೋ ಕ್ರೆಡಿಟ್ (ನೇಸಾ)	0	0	211
4.	ಹೈನುಗಾರಿಕೆ (ನೇಸಾಲ	0	0	14
5.	ವೈಯಕ್ತಿಕ (ನೇಸಾಲ)	6	8	4
6.	ಕೊಳವೆಬಾವಿ	0	0	8

ಆ) ನೇರಸಾಲ ಯೋಜನೆಯಡಿ 243 ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ.

ಇ) ಗುರಿ ಹಾಗೂ ಅನುದಾನಕ್ಕೆ ತಕ್ಕಂತೆ ಮಂಜೂರಾತಿ ನೀಡಲಾಗುವ ಕಾರಣ 301 ಅರ್ಜಿಗಳು ಬಾಕಿ ಇರುತ್ತವೆ. ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಮಂಜೂರಾತಿ ದೊರೆತ ನಂತರ ಹಣಕಾಸಿನ ಲಭ್ಯತೆ ಆಧರಿಸಿ ಮಂಜೂರಾತಿ ನೀಡಲಾಗುವುದು.

ಈ) ಇದೆ.

ಶ್ರೀ ಆರ್. ಅಶೋಕ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಫಲಾನುಭವಿಗಳ ಪಟ್ಟಿಯಲ್ಲಿ ಯಾರಿದ್ದಾರೆ ಆ ಜನ ಸರ್ಕಾರಿಂದ ಸಿಗತಕ್ಕಂತಹ ಸಬ್ಸಿಡಿ ಹಣ ಏನು ಬರಬೇಕು. ಆ ಸಬ್ಸಿಡಿ ಹಣವು ಪೂರ್ತಿ ಆ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಇದರಲ್ಲಿ ಯಾವುದೇ ಮುಚ್ಚು ಮರೆಯಿಲ್ಲ. ಮೊನ್ನೆ ಮಾನ್ಯ ದಿನೇಶ್‌ಗುಂಡೂರಾವ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕಟ್ಟಾಸುಬ್ರಮಣ್ಯನಾಯ್ಡುರವರು ಸಹ ಪ್ರಸ್ತಾಪ ಮಾಡಿದ್ದಾರೆ. ಈಗ ಆಟೋ ಲೋನ್‌ನ್ನು ಬೆಂಗಳೂರಿನಲ್ಲಿ ಕೊಡುತ್ತಾರೆ. ಅದರಲ್ಲಿ 25 ಸಾವಿರ ರೂಪಾಯಿಗಳು ಸಬ್ಸಿಡಿಯೂ ಸಿಗುತ್ತದೆ. ಆ 25 ಸಾವಿರ ರೂಪಾಯಿಗಳಲ್ಲಿ ಒಂದೇ ಒಂದು ನಯಾಪೈಸೆಯೂ ಯಾರು ಫಲಾನುಭವಿಗಳಿಗೆ ಕೊಡಬೇಕಾಗಿರುತ್ತದೆ. ಆ ದಲಿತವರ್ಗದವರಿಗೆ ಅದು ಸಿಗುವುದಿಲ್ಲ. ಆ ಹಣವು ಮಧ್ಯವರ್ತಿಗಳ ಪಾಲಾಗುತ್ತದೆ. ನಾನೇ ಶಾಸಕನಾಗಿ 4 ಬಾರಿ ಆ ಸಂಸ್ಥೆಗೆ ಹೋಗಿದ್ದೆ, ಆಲ್ಲಿ ಬೆಲೆ ಇಲ್ಲ ಮೊನ್ನೆ ದಿನ ಸಚಿವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಹೇಳಿದರು ಹಿಂದುಳಿದ ವರ್ಗದ ನಿಗಮದಲ್ಲಿ ಈ ತರಹ ಅವ್ಯವಹಾರಗಳು ಆಗುತ್ತಿದೆ ಅದಕ್ಕೋಸ್ಕರವಾಗಿ ನಾವು ಲಾಟರಿ ಸಿಸ್ಟಮ್‌ನ್ನು ಮಾಡುತ್ತಿದ್ದೇವೆಂದು ಹೇಳಿದರು. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ಆಗ್ರಹ ಮಾಡುತ್ತಿದ್ದೇನೆ. ಇಲ್ಲೂ ಕೂಡ ಟ್ರಾನ್ಸ್‌ಪರೆಂಟಾಗಿ ಯಾರು ಪ್ರಾಮಾಣಿಕರು ಇದ್ದಾರೆ ಅವರು ಕೊಡುವಂತಹ ಸಾಲ ಇಂತಹವರಿಗೆ ಸಿಗಬೇಕು. ಸರ್ಕಾರ ಕೊಡುವಂತಹ ಸಬ್ಸಿಡಿಯೂ ಕೂಡ ಸಿಗಬೇಕು. ಆ ರೀತಿಯಾಗಿ ಸಿಗುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕೆಂಬ ಆಗ್ರಹವನ್ನು ನಾನು ಮಾಡುತ್ತಿದ್ದೇನೆ. ಅದೇ ರೀತಿಯಾಗಿ ಈ ಒಂದು ಇಲಾಖೆಗೆ ಯಾರಾದರೂ ಶಾಸಕರು ಹೋದಾಗ ದಯವಿಟ್ಟು ಗೌರವದಿಂದ ಅವರು ನಡೆದುಕೊಂಡು, ನಾನು ಇದುವರೆವಿಗೂ ಕೊಟ್ಟಂತಹ 5 ವರ್ಷದಲ್ಲಿ ಸುಮಾರು 20 ಪತ್ರವನ್ನು ಕೊಟ್ಟಿದ್ದೇನೆ. ಅವರು ಒಬ್ಬರಿಗೂ ಕೂಡ ಲೋನ್‌ನ್ನು ಸ್ಯಾಂಕ್ಷನ್ ಮಾಡಲಿಲ್ಲ. ಇಲ್ಲಿ 100 ರಿಂದ 300 ಜನರ ಪಟ್ಟಿಯನ್ನು ಸಹ ಕೊಟ್ಟಿದ್ದಾರೆ. ಇವರು ನನ್ನ ಕ್ಷೇತ್ರದವರೇ ಎಂದು ನನಗೆ ಗೊತ್ತಿಲ್ಲ. ಹೀಗಾದರೆ ನಾವು ಶಾಸಕರಾಗಿ ಅಲ್ಲಿ ಕೆಲಸ ಮಾಡುವುದು ಹೇಗೆ? ಇದನ್ನು ಯೋಚನೆ ಮಾಡಬೇಕು. ನಾನೇ ಸ್ವತಹ ಅಲ್ಲಿಗೆ ಹೋಗಿ ಭೇಟಿ ಮಾಡಿದ್ದೇನೆ. ಅದಕ್ಕಾಗಿ ನಾನು ಸನ್ಮಾನ್ಯ ಸಚಿವರಲ್ಲಿ ಆಗ್ರಹ ಮಾಡುವುದೆಂದರೆ, ಅವರಿಗೆ ಸಿಗತಕ್ಕಂತಹ ಸಬ್ಸಿಡಿ ಹಣ ಪ್ರಾಮಾಣಿಕವಾಗಿ ಅವರಿಗೆ ಸಿಗಬೇಕು. ಅದಕ್ಕೆ ಏನು ಟ್ರಾನ್ಸ್‌ಫರೆನ್ಸಿಯಾಗಿ ನೀವು ಅದನ್ನು ಮಾಡುತ್ತೀರಿ? ಮತ್ತು ಶಾಸಕರು ಅಲ್ಲಿಗೆ ಹೋದಾಗ ನಾವು ಪತ್ರವನ್ನು ಕೊಟ್ಟಾಗ ಸ್ವತಃ ನಾನೇ ಪತ್ರವನ್ನು ಕೊಟ್ಟಾಗ ಒಂದನ್ನೂ ನೀವು ಮಾಡಿಲ್ಲವೆಂದರೆ ನಿಜಕ್ಕೂ ಕೂಡ ನಮಗೆ ಅವಮಾನವಾಗುತ್ತದೆ. ದಯವಿಟ್ಟು ಅದನ್ನು ಸರಿಪಡಿಸುವ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ಸಬ್ಸಿಡಿ ಹಣವನ್ನು ಫಲಾನುಭವಿಗಳಿಗೆ ಮುಟ್ಟಿಸುವಂತಹ ವಿಚಾರದಲ್ಲಿ ದುರುಪಯೋಗವಾಗಿದೆ ಎಂದು ಮಾನ್ಯ ಸದಸ್ಯರು ಆಪಾದನೆಯನ್ನು ಮಾಡಿದ್ದಾರೆ. ಅವರ ಹತ್ತಿರ ನಿರ್ದಿಷ್ಟವಾದ ಇಂತಿಂಥ ಪ್ರಕರಣಗಳು ಇದ್ದರೆ ದಯವಿಟ್ಟು ಅದನ್ನು ಒದಗಿಸಿದರೆ ನಾವು ವಿಚಾರಣೆಗೆ ಒಳಪಡಿಸುತ್ತೇವೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಸಬ್ಸಿಡಿ ಮೋರ್ಷನ್ ಹೇಗೆ ಇರುತ್ತದೋ ಹಾಗೆ ಲೋನ್ ಕಾಂಪನೆಂಟ್.ಕೂಡ ಇರುತ್ತದೆ. ಆದ್ದರಿಂದ ಈ ಸಬ್ಸಿಡಿ ಹಣವನ್ನು ನೇರವಾಗಿ ಬ್ಯಾಂಕ್‌ಗೆ ಬಿಡುಗಡೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದರೆ ದುರುಪಯೋಗದ ಪ್ರಶ್ನೆಯ ಬಗ್ಗೆ ಅದನ್ನು ಮುಚ್ಚಿಹಾಕಬೇಕಾದಂತಹ ಉದ್ದೇಶ ಯಾರಿಗೂ

ಇಲ್ಲ. ಆದ್ದರಿಂದ ದಯವಿಟ್ಟು ಅದರ ಬಗ್ಗೆ ನಿಮ್ಮ ಹತ್ತಿರ ವಿವರಗಳು ಇದ್ದರೆ ಕಳುಹಿಸಿಕೊಟ್ಟರೆ ಆ ಕೆಲಸವನ್ನು ನಾವು ಮಾಡುತ್ತೇವೆ. ಸಾಮಾನ್ಯವಾಗಿ ಜಿಲ್ಲೆಗೆ ಮತ್ತು ಆಯಾ ಕ್ಷೇತ್ರಕ್ಕೆ ಟಾರ್ಗೆಟ್‌ನ್ನು ಮಾಡಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಜಿಲ್ಲಾಧಿಕಾರಿಗಳ ಒಂದು ಕಮಿಟಿ ಇದೆ. ಆ ಟಾರ್ಗೆಟ್ ಪರಕಾರವೇ ಆಯಾ ಜಿಲ್ಲೆಗಳಿಗೆ ಹಂಚಲಾಗುತ್ತದೆ. ಮಾನ್ಯ ಶಾಸಕರು ಹೇಳಿದ ರೀತಿಯಲ್ಲಿ ಬೇರೆ ಪ್ರಸ್ತಾಪ ಮಾಡಿರತಕ್ಕಂತಹ ವಿಚಾರಕ್ಕೆ ಎಲ್ಲಿ ಶಾಸಕರಿಗೆ ಮಾನ್ಯತೆ ಕೊಡಲಿಲ್ಲ. ಏನು ನೀವು ಕೊಟ್ಟಿದ್ದೀರಿ, ಜಿಲ್ಲೆಗೆ ಅಥವಾ ನಿಮ್ಮ ಕ್ಷೇತ್ರಕ್ಕೆ ಏನು ಟಾರ್ಗೆಟ್ ಇದೆ ಅದರ ಪ್ರಕಾರವೇ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಆರ್. ಅಶೋಕ್ : ಅಲ್ಲಿ ಮಧ್ಯವರ್ತಿಗಳಿಗೆ ಇರುವಂತಹ ಬೆಲೆ ಬೇರೆ ಯಾರಿಗೂ ಇಲ್ಲ. ಅದಕ್ಕಾಗಿ ನಾನು ಅಲ್ಲಿ 4 ಸಾರಿ ಹೋಗಿದ್ದೇನೆಂದು ಹೇಳಿರುವುದು, ಮಧ್ಯವರ್ತಿಗಳು ಹೋದರೆ ಅಲ್ಲಿಬೇಗ ಕೆಲಸಗಳು ಆಗುತ್ತದೆ. ಏಕೆಂದರೆ ಈ ಸಬ್ಸಿಡಿಯ ಹಣವಿದೆಯಲ್ಲಾ ಇದು ಬಹಳ ಮಹತ್ವವಾದುದು. ಈ ಹಣ ಯಾರಿಗೆ ಸಿಗಬೇಕೆನ್ನುವುದೇ ಬಹಳ ಮಹತ್ವ.

6.40 ಪಿ.ಎಂ

ಅಲ್ಲಿ ಸಾಮಾನ್ಯ ಜನರು ಯಾರು ಅಲ್ಲಿಗೆ ಹೋದರು ಅದು ಸಿಗುವುದಿಲ್ಲ. ಅದಕ್ಕೆ ಸರಿಯಾದಂತಹ ರೂಟ್ ಇದೆ. ಆ ಚಾನಲ್ ಪ್ರಕಾರ ಹೋದರೆ ಅಲ್ಲಿ ಸಾಲವು ಕ್ಲಿಯರ್ ಆಗಿ ಸಿಗುತ್ತದೆ. ಅಲ್ಲಿಗೆ ನಾವ್ಯಾರು ಹೋದರೂ ಕೂಡ ಆಗುವುದಿಲ್ಲ. ಅದಕ್ಕಾಗಿ ನಾನು ಮಾನ್ಯ ಸಚಿವರಿಗೆ ಹೇಳಿದೆ. ಏನಾದರೂ ಒಂದು ಟ್ರಾನ್ಸ್‌ಫರೆಂಟಾಗಿ ಲಾಟರಿ ಮುಖಾಂತರ ಎತ್ತುತ್ತೀರಿ, ಸಂತೋಷ, ಶಾಸಕರು ಹೋದರೆ ಅವರು ಕೊಡುವುದೇ ಬೇಡ. ನಮ್ಮ ಲೆಟರ್‌ಗೆ ಬೆಲೆಯೂ ಬೇಡ, ಲಾಟರಿ ಮುಖಾಂತರವಾದರೂ ಕೂಡ ಎತ್ತಬೇಕು. ಪ್ರಾಮಾಣಿಕವಾಗಿ ಅವರಿಗೆ ತಲುಪಬೇಕು. ಚೆಕ್ ಕೊಡುವುದರ ಮುಖಾಂತರ ಅವರಿಗೆ ತಲುಪುವುದಿಲ್ಲ. ನೀವು ಚೆಕ್ ಕೊಡುವುದಕ್ಕೆ ಮುಂಚೆಯೇ ಮಧ್ಯವರ್ತಿಯು ಹಣವನ್ನು ವಸೂಲಿ ಮಾಡಿಬಿಟ್ಟಿರುತ್ತಾನೆ. ನೀವು ಏನು ಚೆಕ್‌ನ್ನು ಕೊಡುತ್ತೀರಿ, ಆ ಹಣವು ಫಲಾನುಭವಿಗಳಿಗೆ ತಲುಪುವುದಕ್ಕೆ ಮುಂಚೆಯೇ 25 ಸಾವಿರ ರೂಪಾಯಿಗಳು ಮಧ್ಯವರ್ತಿಗೆ ಸೇರಬೇಕು. ಅದು ಅವನಿಗೆ ಸೇರಲಿಲ್ಲವೆಂದರೆ ಚೆಕ್ ಆತನಿಗೆ ಹೋಗುವುದೇ ಇಲ್ಲ. ಅಲ್ಲಿ ಆ ರೀತಿಯಾಗಿ ಬ್ಯಾಲೆನ್ಸ್‌ನ್ನು ಮಾಡುತ್ತಾರೆ. ಟ್ರಾನ್ಸ್ ಫರೆನ್ಸ್ ಆಗಿ ಲಾಟರಿ ಮುಖಾಂತರ ಈ ರೀತಿಯಾಗಿ ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಯಾವ ಉದ್ದೇಶವಿದೆ. ಈ ಉದ್ದೇಶದ ಪೂರಕವಾಗಿ ಇಲ್ಲಿಯವರೆವಿಗೆ ಹಣ ಯಾರಿಗಾದರೂ ಫಲಾನುಭವಿಗಳು ತೆಗೆದುಕೊಂಡಿದ್ದಾರೆಯೇ ಅವರ ಕಲ್ಯಾಣ ಆಗಿದೆಯೋ ಹೇಗೆ ಎಂದು ನೋಡಬೇಕಾಗುತ್ತದೆ. ಏಕೆಂದರೆ ಇದನ್ನು ರಿವ್ಯೂ ಮಾಡಬೇಕು. ಇಲ್ಲಿಯವರೆವಿಗೆ ಎಷ್ಟು ಜನಕ್ಕೆ ಹಣವು ಮುಟ್ಟಿದೆ ಅವರ ಕಲ್ಯಾಣವಾಗಿದೆಯೇ ಹೇಗೆ? ಅದು ಬಹಳ ಮುಖ್ಯವಾದುದು. ಏಕೆ ಆಗಿಲ್ಲವೆಂದರೆ, ಇದರಲ್ಲಿ ಮಧ್ಯವರ್ತಿಗಳೇ ಇರುವುದು, ಅದು ಮಧ್ಯವರ್ತಿಗಳಿಂದಲೇ ನಡೆಯುತ್ತಿರುವುದು. ಶಾಸಕರಾದವರು ಸ್ವತಃ ಅಲ್ಲಿಗೆ ಭೇಟಿ ಕೊಟ್ಟರೂ ಕೂಡ ಒಬ್ಬರದು ಆಗಿಲ್ಲವೆಂದು ಹೇಳುತ್ತಾರೆ. ಅಂದರೆ ಎಷ್ಟು ಪಾರದರ್ಶಕವಿದೆ ನೋಡಿ. ಈ ವ್ಯವಹಾರಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. ಆ

ಜನರ ಕಲ್ಯಾಣವಾಗಬೇಕು. ಅದು ಆದರೆ ಹಣ ಕೊಟ್ಟಿರುವುದು ಸಬ್ಸಿಡಿ ಕೊಟ್ಟಿರುವುದು ಬ್ಯಾಂಕ್‌ನವರು ಕೊಟ್ಟಿರುವುದು ಪ್ರಯೋಜನವಾಗುತ್ತದೆ. ನೀವು ಅದರ ಬಗ್ಗೆ ಸ್ವಲ್ಪ ಸರ್ವೆ ಮಾಡಿ ಎಷ್ಟು ಜನರಿಗೆ ಕಲ್ಯಾಣವಾಗಿದೆಯೆಂದು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ಆ ವರ್ಗದ ಜನರಿಗೆ ಕೊಡತಕ್ಕಂತಹ.....

ಉಪಾಧ್ಯಕ್ಷರು : ಮಾನ್ಯ ಸಚಿವರೇ ಒಂದು ನಿಮಿಷ ತಾಳಿ, ಮಾನ್ಯ ಸದಸ್ಯರಾದ ಚೆನ್ನಿಗಪ್ಪನವರು ಮಾತನಾಡುತ್ತಾರೆ. ನಂತರ ತಾವು ಹೇಳಬಹುದು.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ಸಮಾಜಕಲ್ಯಾಣ ಇಲಾಖೆಯಲ್ಲಿ ಏನು ಸಾಲವನ್ನು ಕೊಡುತ್ತೇವೆ ಅದರ ಬಗ್ಗೆ ಮಾನ್ಯ ಸದಸ್ಯರಾದ ಅಶೋಕರವರು ತಮ್ಮ ನೋವನ್ನು ತೋಡಿಕೊಂಡರು. ಶಾಸಕರು ಅವರ ಕ್ಷೇತ್ರದಲ್ಲಿರುವಂತಹ ಬಡವರಿಗೆ ಒಂದು ಕಾಗದವನ್ನು ಬರೆದುಕೊಟ್ಟು ಇಂತಹವರಿಗೆ ಲೋನ್ ಕೊಡಿ ಎಂದು ಹೇಳಿದಾಗ ಅವರಿಗೆ ಸಾಲ ಸಿಗುವುದಿಲ್ಲ. ಯಾರು ಸುಳ್ಳು ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಬರುತ್ತಾರೆ, ಯಾರು ಬೇರೆ ಕಡೆಯಿಂದ ಅಲ್ಲಿಗೆ ಬಂದು ಇಂಪೋರ್ಟ್ ಆಗಿರುತ್ತಾರೆ ಅಂಥವರಿಗೆ ಸಿಗುತ್ತಿದೆ ಸನ್ಮಾನ್ಯ ಸಚಿವರು ಬಹಳ ಅನುಭವಸ್ಥರಾಗಿದ್ದಾರೆ. ತಾವು ಹಿರಿಯರಾಗಿದ್ದೀರಿ, ಇದರ ಬಗ್ಗೆ ತಾವು ಪರಿಶೀಲನೆಯನ್ನು ಮಾಡಿಸಿ. ಸುಮಾರು 100ಕ್ಕೆ 99 ಪರ್ಸೆಂಟ್ ಯಾರಿಗೆ ಸಿಗಬೇಕು ಅವರಿಗೆ ಸಿಕ್ಕಿರುವುದಿಲ್ಲ. ಬೇರೆ ಕಡೆಯಿಂದ ಬಂದಂತಹ ಜನರು ಡೂಪ್ಲಿಕೇಟ್ ಸರ್ಟಿಫಿಕೇಟ್‌ನ್ನು ಫೋಟೋವನ್ನು ಕೊಟ್ಟು ಹಣವನ್ನು ತೆಗೆದುಕೊಂಡಿದ್ದಾರೆ. ಇದು ದೇಶಕ್ಕೆ ಈ ಕಾನೂನಿಗೆ ಅವಮಾನ ಮಾಡಿದ ಹಾಗೆ ಆಗುತ್ತದೆ. ತಮ್ಮ ಮುಖಾಂತರ ಅವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದನ್ನು ಕಂಟ್ರೋಲ್ ಮಾಡದೆಹೋದರೆ ನಾವೆಲ್ಲರೂ ಇಲ್ಲಿ ಕುಳಿತುಕೊಳ್ಳುವುದಕ್ಕೆ ಅನರ್ಹರು ಎಂದು ಹೇಳುತ್ತೇನೆ. ಇದನ್ನು ದಯಮಾಡಿ ಮಾನ್ಯ ಸಚಿವರು ಮಾಡಬೇಕು. ತಮ್ಮ ಕಾಲದಲ್ಲಿ ಇದಕ್ಕೆ ಒಂದು ಆಯಾಮವನ್ನು ತರಬೇಕೆಂದು ಹೇಳಿ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ಬೆಂಗಳೂರು ನಗರದಲ್ಲಿ ಸ್ವಲ್ಪ ಈ ರೀತಿಯಾಗಿ ಮಧ್ಯವರ್ತಿಗಳ ಹಾವಳಿ ಇರುವುದು ನಿಜವಿದೆ. ನಾನು ಇಲ್ಲವೆಂದು ಹೇಳುತ್ತಿಲ್ಲ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ನೀವು ಎಲ್ಲಾ ಶಾಸಕರನ್ನು ಕೇಳಿಕೊಳ್ಳಿ, ಎಲ್ಲಾ ಕಡೆಯೂ ಈ ಮಧ್ಯವರ್ತಿಗಳ ಹಾವಳಿ ಇದೆ. ಎಲ್ಲಿ ಹೋದರೂ ಇದು ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಊರಿನಲ್ಲಿ ಇಲ್ಲ. ಮಾನ್ಯ ಚೆನ್ನಿಗಪ್ಪನವರೇ, ನಿಮ್ಮ ತಾಲ್ಲೂಕಿನಲ್ಲಿ ಮತ್ತು ನನ್ನ ತಾಲ್ಲೂಕಿನಲ್ಲಿ ಈ ರೀತಿಯಾಗಿ ಅನ್ಯಾಯ ನಡೆದಿದೆಯೇ?

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಸಚಿವರು ಬಹಳ ಹಿರಿಯರಾಗಿದ್ದಾರೆ. ನೇರ ಸಾಲ ನೂರಕ್ಕೆ 90 ಪರ್ಸೆಂಟ್ ಯಾರಿಗೂ ಸಿಕ್ಕಿಲ್ಲ. ಮಧ್ಯವರ್ತಿಗಳ ಕಡೆಯವರಿಗೆ ಸಿಕ್ಕಿದೆ. ಸ್ವಲ್ಪ ಜನರಿಗೆ ಸಿಕ್ಕಿರಬಹುದು ಅಷ್ಟೇ. ಬಹಳ ಜನರಿಗೆ ಸಿಕ್ಕಿರುವುದಿಲ್ಲ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಈಗ ಮಾನ್ಯ ಸಚಿವರಿಗೆ ಖಾತ್ರಿಯಾಯಿತು.

ಶ್ರೀ ಕಾಗೋಡು ತಿಮ್ಮಪ್ಪ : ಇದನ್ನು ನಾನು ಒಪ್ಪುತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, Yor are concernd with backward classes and minority communities ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

ಮೊನ್ನೆ ಈ ಆಟೋರಿಕ್ಷಾ ಯೂನಿಯನ್‌ರವರೆಲ್ಲರೂ ನನ್ನ ಹತ್ತಿರ ಬಂದಿದ್ದರು. I directed them to meet you. ನೀವು ದಯವಿಟ್ಟು ಅವರನ್ನು ಮೀಟ್ ಮಾಡಿ. ಅವರು ಕೆಲವು ಡಾಕ್ಯುಮೆಂಟ್ಸ್‌ಗಳನ್ನು ಪ್ರೊಡ್ಯೂಸ್ ಮಾಡುತ್ತಾರೆ. ಆ ಸಾಲವನ್ನು ಕೊಟ್ಟಿದ್ದಾರಲ್ಲಾ ಆಟೋ ಪರ್ಮಿಟ್ ಇರುವವರಿಗೆ ಸಾಲವನ್ನು ಕೊಡಬೇಕಲ್ಲವೇ? ಆಟೋ ಪರ್ಮಿಟ್ ಇಲ್ಲದೆ ಇದ್ದವರಿಗೂ ಕೂಡ ಸಾಲವನ್ನು ಕೊಟ್ಟಿದ್ದಾರೆ. ಅದು ಎಷ್ಟು ಕೊಟ್ಟಿದ್ದಾರೆಂದರೆ it is in crores, not in lakhs. ಅದರ ಬಗ್ಗೆ ನಾನು ಚರ್ಚೆ ಮಾಡಬೇಕೆಂದು ಇದ್ದೆ ಸಮಯದ ಅಭಾವದಿಂದ ಆಗಲಿಲ್ಲ. ಪ್ರಶ್ನೋತ್ತರ ಸಂದರ್ಭದಲ್ಲಿ ಅದರ ಬಗ್ಗೆ ನನಗೆ ಮಾತನಾಡುವುದಕ್ಕೂ ಟೈಮ್ ಸಹ ಇಲ್ಲ. ಅದರ ಬಗ್ಗೆ ಪೇಪರ್ಸ್‌ನ್ನು ತಂದಿಲ್ಲ. ಅದನ್ನು ನಾನು ಕಳುಹಿಸಿಕೊಡುತ್ತೇನೆ. ದಯವಿಟ್ಟು, ಅವರನ್ನು ಕರೆಸಿ ಮಾತನಾಡಿ. It is a scandal which, I think, you should go for a probe. ನೀವು ಒಂದು ಸಿಓಡಿ ಎನ್‌ಕ್ವಾಯರಿ ಮಾಡಿಸಿ, ತಪ್ಪಿತಸ್ಥರ ಮೇಲೆ ನೀವು ಕ್ರಮವನ್ನು ತೆಗೆದುಕೊಂಡರೆ, ನನಗೆ ಅನಿಸುತ್ತದೆ ಅವರಿಗೂ ಸ್ವಲ್ಪ ಅನುಕೂಲವಾಗುತ್ತದೆ. ಜಸ್ಟೀಸ್ ಕೊಟ್ಟಂತೆಯೂ ಕೂಡ ಆಗುತ್ತದೆ. ದಯವಿಟ್ಟು ತಾವು ಅದನ್ನು ಮಾಡಬೇಕು. I will send the papers to you.

ಶ್ರೀ ಕಾಗೋಡು ತಿಮ್ಮಪ್ಪ : ಎಲ್ಲಿ ಅನ್ಯಾಯ ನಡೆದಿದೆ ಎಂದು ಕಂಡು ಬರುತ್ತದೆಯೋ ಅದನ್ನು ನಾವು ತನಿಖೆ ಮಾಡಲೇಬೇಕಾಗುತ್ತದೆ. ತಮ್ಮ ಹತ್ತಿರ ಏನಾದರೂ ಮಾಹಿತಿ ಇದ್ದರೆ ಅದನ್ನು ಕಳುಹಿಸಿಕೊಡಿ. ಈ ಜಾಡಮಾಲಿ ಕಾರ್ಯಕ್ರಮದಲ್ಲಿ ನಾನೇ ಹಂಚಿದ್ದೇನೆ. ತದನಂತರ ಅಲ್ಲಿ ಕೆಲವು ಮೋಸ ನಡೆದಿದೆ ಎಂದು ತಿಳಿದು ಬಂದಿದೆ. ಇದರ ಬಗ್ಗೆ ತಾವು ಹೇಳಿದ್ದೀರಿ, ಯಾರಿಗೆ ಡ್ರೈವಿಂಗ್ ಲೈಸೆನ್ಸ್ ಇರುತ್ತದೆ. ಯಾರ ಹತ್ತಿರ ಪರ್ಮಿಟ್ ಇದೆ ಅಂತಹವರಿಗೆ ಸಾಲವನ್ನು ಕೊಡಬೇಕೆಂದು ಇದೆ. ಯಾರಿಗೆ ಅದು ಇಲ್ಲ. ಇಲ್ಲದಿದ್ದರಿಗೆ ಕೊಟ್ಟಿದ್ದರೆ ಅದು ತಪ್ಪಾಗುತ್ತದೆ. ಆ ರೀತಿಯಾಗಿ ಕೊಡಕೂಡದು. ಅವರು ವಿವರವನ್ನು ತಂದು ಕೊಟ್ಟರೆ ಖಂಡಿತವಾಗಿಯೂ ತನಿಖೆ ಮಾಡಿಸುತ್ತೇನೆ. ಇದರಲ್ಲಿ ಮುಚ್ಚಿಡಬೇಕಾದಂತಹ ಅಗತ್ಯವಿಲ್ಲ. ಈ ರೀತಿಯಾಗುವುದನ್ನು ತಡೆಯಬೇಕು. ಶಾಸಕರಾದ ನಾವು ನಮ್ಮ ನಮ್ಮ ಕ್ಷೇತ್ರದಲ್ಲಿ ನಮಗೆ ರಿವ್ಯೂ ಮಾಡತಕ್ಕಂತಹ ಅವಕಾಶವಿದೆ.

ಶ್ರೀ ಬೆಲ್ಲದ್ ಚಂದ್ರ ಕಾಂತ್ ಗುರಪ್ಪ : ನಾವು ರಿವ್ಯೂ ಮಾಡುತ್ತೇವೆ. ನಿಮಗೇನಾದರೂ ಮಾಹಿತಿ ಕೊಟ್ಟರೆ ನೀವು ಅವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಖಂಡಿತವಾಗಿಯೂ ತೆಗೆದುಕೊಳ್ಳುತ್ತೀರಾ? ಹಾಗಾದರೆ ರಿವ್ಯೂ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಖಂಡಿತವಾಗಿಯು ತೆಗೆದುಕೊಳ್ಳುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಒಂದು ಸರ್ಕ್ಯುಲರ್‌ನ್ನು ಕಳುಹಿಸಿಕೊಡಿ, ಯಾರು ಪ್ರಾಮಾಣಿಕವಾಗಿ ನ್ಯಾಯವಾಗಿ ಜನರಿಗೆ ಸೇವೆಯನ್ನು ಮಾಡುವವರು ಇರುತ್ತಾರೋ ಅಂತಹ ಶಾಸಕರು ರಿವ್ಯೂವನ್ನು ಮಾಡುತ್ತಾರೆ.

ಶ್ರೀ ಸಿ. ಚೆನ್ನಿಗಪ್ಪ : ತಾವು ಒಂದು ಕಮಿಟಿಯನ್ನು ಮಾಡಿ ಆ ಕಮಿಟಿಯಲ್ಲಿ ನಾವು ಕುಳಿತುಕೊಂಡು ಚರ್ಚೆ ಮಾಡಿ ಫಲಾನುಭವಿಗಳ ಪಟ್ಟಿಯನ್ನು ತಮಗೆ ಕಳುಹಿಸಿಕೊಡುತ್ತೇವೆ. ಆಗ ಅಲ್ಲಿ ಅನ್ಯಾಯವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಯಾವ ಕಮಿಟಿಗೂ ಆದೇಶವಿಲ್ಲ. ಇದರ ಬಗ್ಗೆ ತಾವು ಒಂದು ಆದೇಶವನ್ನು ಮಾಡಿಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ಆ ಬೋರ್‌ವೆಲ್ ವಿಚಾರದಲ್ಲಿ ನಾನೇ ಸಮಿತಿಯನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದೇವೆ. ಆಯ್ಕೆ ಮಾಡತಕ್ಕಂತಹ ವಿಚಾರ ಅಷ್ಟೇ ಅಲ್ಲ. ಅವನಿಗೆ ಏನಾದರೂ ತೊಂದರೆ ಇದ್ದರೆ ಪಂಪ್‌ಸೆಟ್‌ಗಳನ್ನು ಕೊಡದೆ ಹೋಗಿದ್ದರೆ, ಗುಣಮಟ್ಟದ್ದು ಕೊಡದೆ ಹೋಗಿದ್ದರೆ ಬಗ್ಗೆ ತನಿಖೆ ಮಾಡಿ ವರದಿ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಅಧಿಕಾರವನ್ನು ಕೊಡುವಂತಹ ಸಮಿತಿಯನ್ನು ರಚನೆ ಮಾಡಿದ್ದೇವೆ. ಆದಾದ ಮೇಲೆ ಆಯ್ಕೆ ಮಾಡುವುದು, ಅರ್ಹರಿಗೆ ಕೊಡುವುದು ಸ್ಥಿತಿ ಬಂದಿದೆ. ಅಲ್ಲಿಯೂ ಒಂದು ಕೆಲಸವನ್ನು ಮಾಡಿದ್ದೇವೆ. ಕೆಲವು ಸಾರಿ ಗಂಗಾಕಲ್ಯಾಣದಲ್ಲಿ ಮುಂಚಿತವಾಗಿ ವಿದ್ಯುಚ್ಛಕ್ತಿಯ ಹಣವನ್ನು ಕಟ್ಟಬೇಕಾಗಿತ್ತು. ನಾವು ಕಟ್ಟುವುದು ಬೇಡ, ಇದರಿಂದ ಕಟ್ಟೋಣ. ನಾವು ಕೊಡುವಂತಹ ಹಣದಲ್ಲಿ ಪೂರ್ಣ ಆಗುವುದಾದರೆ ಪೂರ್ಣ ಅದರಲ್ಲಿಯೇ ಮಾಡಬೇಕು. ಒಂದು ವೇಳೆ ಕಡಿಮೆಯಾಗುವುದಾದರೆ ಅವನಿಗೆ ಮೇಲಾಗಿ 10 ಲಕ್ಷ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಟ್ಟು ಗಂಗಾ ಕಲ್ಯಾಣ ಯೋಜನೆಯನ್ನು ಮಾಡಿಸಬೇಕೆಂದು ಉದ್ದೇಶದಿಂದಲೇ ಆ ನಿಯಮಗಳನ್ನು ತಂದಿದ್ದೇವೆ. ಕಾರಣವೇನೆಂದರೆ ನಾನು ಕೆಲವು ಕಡೆ ಹೋಗಿದ್ದೆ. ತೀರಾ ಬಡವರು ಇರುತ್ತಾರೆ. ಅನರ್ಹರು ಇರುತ್ತಾರೆ ಅವನಿಗೆ ಮುಂಗಡವಾಗಿ ಈ ವಿದ್ಯುಚ್ಛಕ್ತಿಗೆ ಅವನ ಹತ್ತಿರ ಹಣವಿರುವುದಿಲ್ಲ. ಯಾರಿಗೆ ಹಣವನ್ನು ಕೊಡುವಂತಹ ಶಕ್ತಿ ಇರುತ್ತದೆಯೋ ಯಾರ ಹತ್ತಿರ ಹಣವಿರುತ್ತದೆಯೋ ಅವನಿಗೆ ಮಾತ್ರ ಇದು ಸಿಗುತ್ತದೆ. ಇದನ್ನು ತಪ್ಪಿಸುವಂತಹ ದೃಷ್ಟಿಯಿಂದ ನಿಜವಾಗಿಯೂ ಅರ್ಹರಾದಂತಹ ವ್ಯಕ್ತಿಗೆ ಹಣವನ್ನು ಕೊಡಲು ಆಗದೆ ಇರುವಂತಹ ಸ್ಥಿತಿ ಇದ್ದಾಗ ಆ ವಿದ್ಯುಚ್ಛಕ್ತಿ ಮತ್ತು ಮುಂಗಡ ಕಟ್ಟುವಂತಹ ಹಣವನ್ನು ಇಲಾಖೆಯೇ ಕೊಡಬೇಕೆಂದು ಹೇಳಿ ನಿಯಮಾವಳಿಗಳನ್ನು ಬದಲಾವಣೆ ಮಾಡಿ ಆ ಅವಕಾಶವನ್ನು ತಮಗೆ ಮಾಡಿಕೊಟ್ಟಿದ್ದೇವೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಹಾಗಾದರೆ ಶಾಸಕರ ಅಧ್ಯಕ್ಷತೆಯಲ್ಲಿ ಇದನ್ನು ಮಾಡುವ ಬಗ್ಗೆ ವ್ಯವಸ್ಥೆಯನ್ನು ಮಾಡಿ. ಸರ್ಕ್ಯುಲರ್‌ನ್ನು ಹೊರಡಿಸಿ.

ಶ್ರೀ ಆರ್. ಅಶೋಕ : ಸಚಿವರು ಏನು ಹೇಳಿದರು. ಗಂಗಾಕಲ್ಯಾಣ ವಿಚಾರವಾಗಿ ಶಾಸಕರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೇನೆ. ಈಗ ಯಾವುದೇ ಕಂಪ್ಲೇಂಟ್ಸ್ ಇಲ್ಲ. ಸಾಕಷ್ಟು ಒಳ್ಳೆಯದು ಎಂದು ತೀರ್ಮಾನ ಮಾಡಿದ್ದೇನೆಂದು ಹೇಳಿದರು. ಅದೇ ರೀತಿಯಾಗಿ ಎಸ್‌ಸಿ ಎಸ್‌ಟಿ ಕಾರ್ಪೊರೇಷನ್ ಬಗ್ಗೆಯೂ ಕೂಡ ಶಾಸಕರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ. ನೇರ ಸಾಲ ಕೊಡುವುದರಲ್ಲಾಗಲೀ ಅಥವಾ ಯಾವುದೇ ಸಾಲವನ್ನು ಕೊಡುವುದರಲ್ಲಾಗಲಿ, ಏರಿಯಾ ಶಾಸಕರ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡುವ ಹಾಗೆ ಮಾಡಿ ನೀವು ಗಂಗಾಕಲ್ಯಾಣಕ್ಕೆ ತಂದಿರುವುದನ್ನು ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ನಲ್ಲಿ ಏಕೆ ತರುವುದಕ್ಕಾಗುವುದಿಲ್ಲ? ಇದರಲ್ಲಿ ಏನು ತೊಂದರೆ ಇದೆ ತಾವು ದಯವಿಟ್ಟು ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಇ.ಓ. ಯಾರಿದ್ದಾರೆ ಅವರೇ ಸಾಲದ ಅರ್ಜಿ ಮತ್ತು ವಗೈರೆ ಕೊಡುವುದಕ್ಕೆ ಅವರೇ ನೋಡಲ್ ಅಫೀಸರ್ ಆಗಿದ್ದಾರೆ. ಪ್ರತಿಯೊಂದು ತಾಲ್ಲೂಕುಪಂಚಾಯಿತಿಯ ಮುಂದೆ ಒಂದು ಬೋರ್ಡನ್ನು ಹಾಕಿದ್ದೇವೆ. ಸಾಲಕ್ಕೆ ಬೇಕಾಗಿರುವಂತಹ ಅರ್ಜಿಗಳನ್ನು ಅಲ್ಲಿ ತಾಲ್ಲೂಕು ಪಂಚಾಯಿತಿಯ ಕಛೇರಿಯಲ್ಲಿ ಸಿಗುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಎಲ್ಲಿ ಆ ರೀತಿಯಾಗಿ ಅರ್ಜಿ ಸಿಗುವುದಿಲ್ಲ. ನೀವು ಅರ್ಜಿ ಸಿಗದೆ ಹೋದರೂ ಕೂಡ

ಖಾಲಿ ಕಾಗದದಲ್ಲಿಯೂ ಕೂಡ ಅರ್ಜಿಯನ್ನು ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಆದ್ದರಿಂದ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಇವರಿಗೆ ಬೇಕಾದಂತಹ ಅರ್ಜಿಗಳು ಸಿಗಬೇಕು ಮತ್ತು ನಮ್ಮ ತಾಲ್ಲೂಕು ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ಯಾರಿದ್ದಾರಲ್ಲಾ ಅವರನ್ನೇ ನೊಡಲ್ ಆಫೀಸರ್‌ನ್ನಾಗಿ ಮಾಡಿದ್ದೇವೆ.

ಗೊಂದಲ

ಶ್ರೀ ಸಿ. ಚೆನ್ನಿಗಪ್ಪ : ಬೇರೆಯವರಿಗೂ ಸಿಗುವಂತೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಆಯಿತು, ಪರಿಶೀಲನೆ ಮಾಡುತ್ತೇನೆ. ನೀವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ, ಪ್ರತಿಯೊಂದು ತಾಲ್ಲೂಕಿಗೂ ನಾನು ಮಾಡಿರುವ ನೆನಪಿದೆ. ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕೈಗಾರಿಕೆ ಆರಂಭಿಸಲು ಏಕ ಗವಾಕ್ಷಿ ಯೋಜನೆ

624 (5387) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೈಗಾರಿಕೆಯನ್ನು ಆರಂಭಿಸಲು ಯಾವ ಯಾವ ಇಲಾಖೆಗಳಿಂದ ಅನುಮತಿ ಪಡೆಯಬೇಕು?

ಆ) ಕೈಗಾರಿಕೆಗಳು ನಡೆಸಬೇಕಾದರೆ ಯಾವ ಯಾವ ಇಲಾಖೆಗಳ ತಪಾಸಣೆಗೆ ಒಳಪಡಬೇಕು?

ಇ) ಕೈಗಾರಿಕೆ ಮುಚ್ಚುವಂತಹ ಪರಿಸ್ಥಿತಿಯಲ್ಲಿ ಎಷ್ಟು ಇಲಾಖೆಗಳ ಅನುಮತಿ ಪಡೆಯಬೇಕು?

ಈ) ಕೈಗಾರಿಕೆಗಳನ್ನು ಆರಂಭಿಸಲು ಏಕ ಗವಾಕ್ಷಿ ಯೋಜನೆಯಂತೆ ಮುಚ್ಚುವ ಅನಿವಾರ್ಯತೆ ಬಂದಲ್ಲಿ ಮುಚ್ಚಲು ಏಕಗವಾಕ್ಷಿ ಯೋಜನೆ ತರಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಘಟಕಗಳು ಉತ್ಪಾದಿಸುವ ವಸ್ತುಗಳ ಮತ್ತು ಆ ವಸ್ತುಗಳನ್ನು ತಯಾರಿಸಲು ಉಪಯೋಗಿಸುವ ರೀತಿ ಅನುಸಾರವಾಗಿ ಈ ಕೆಳಕಂಡ ಅನುಮೋದನೆಗಳನ್ನು ಸಾಮಾನ್ಯವಾಗಿ ಪಡೆಯಬೇಕಾಗಿರುತ್ತದೆ.

1. ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಘಟಕ ಸ್ಥಾಪಿಸಲು ಒಪ್ಪಿಗೆ ಪತ್ರ.
2. ಘಟಕವನ್ನು ಪ್ರಾರಂಭಿಸುವ ಮುನ್ನ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಮದ ಒಪ್ಪಿಗೆ ಪತ್ರ.
3. ಕೈಗಾರಿಕೆ ಅಧಿನಿಯಮ 1948 ರನ್ವಯ ಮಂಜೂರಾತಿ.
4. ಘಟಕದಲ್ಲಿ ಬಾಯ್ಲರ್ ಅಳವಡಿಸಿದಲ್ಲಿ ಬಾಯ್ಲರ್ ಅಧಿನಿಯಮದ ಪ್ರಕಾರ ಮಂಜೂರಾತಿ.
5. ಪೆಟ್ರೋಲ್ ಉತ್ಪನ್ನಗಳನ್ನು ಶೇಖರಿಸಲು ಎಕ್ಸ್‌ಪೋಸಿವ್ ಅಧಿನಿಯಮದ ಪ್ರಕಾರ ಪರವಾನಿಗೆ.
6. ಕಾರ್ಮಿಕ ಶಾಸನದಂತೆ ಕಾರ್ಮಿಕ ಇಲಾಖೆಯಿಂದ ವಿವಿಧ ರೀತಿಯ ನೋಂದಣಿಗಳು.